ಕಡೆ ಹೋಗುತ್ತಿರುವಾಗ ಫುಟ್‌ಪಾತ್ ಮೇಲೆ ಗಾಡಿಗಳ ಮೇಲೆ ಚಿತ್ರಾನ್ನ, ಪೂರಿ, ಆಮ್ಲೇಟ್ ಮಾರುತ್ತಿರುವುದು ಕಂಡು ಬಂದಿತ್ತು. ಸರೋಜಮ್ಮ ಆಮ್ಲೇಟ್ ಅಂಗಡಿಯ ಮುಂದೆ ನಿಂತು ಎರಡು ಆಮ್ಲೇಟ್ ಹೇಳಿದ್ದಳು. ಬೆಳಗ್ಗೆಯಿಂದ ಉಪವಾಸ ಇದ್ದಿದ್ದರಿಂದಲೋ ಏನೋ ಬಿಸಿಬಿಸಿ ಆಮ್ಲೇಟ್ ತುಂಬಾ ರುಚಿಯಾಗಿತ್ತು. ಆಮ್ಲೇಟ್ ತಿನ್ನುತ್ತಾ ಸರೋಜಮ್ಮ, ''ಅಕ್ಕಯ್ಯಮ್ಮ ಇವ್ರೇನಿಲ್ಲ ಅಂದ್ರೂ ದಿನಕ್ಕೆ ಎಲ್ಲಾ ಖರ್ಚು ಕಳ್ಕಂಡು ಕನಿಷ್ಠ ಎರಡು ಸಾವಿರನಾದ್ರೂ ಸಂಪಾದನೆ ಮಾಡ್ತಾರೆ. ಅದುಕ್ಕೆ ಹೇಳೋದು ಕೆಟ್ಟು ಪಟ್ನ ಸೇರು ಅಂತ.'' ಎಂದು ಆಮ್ಲೇಟ್ ಕಾಸು ಕೊಟ್ಟಿದ್ದಳು. ಒಂದೊಂದು ಆಮ್ಲೇಟ್ ಬೆಲೆ ಹದಿನೈದು ರೂಪಾಯಾಗಿತ್ತು. ಆ ಒಂದು ಘಟನೆ ಕೂಡಾ ಅಕ್ಕಯ್ಯಮ್ಮನ ಮನದಲ್ಲಿ ತೇಲಿ ಹೋಗಿತ್ತು. ಅಕ್ಕಯ್ಯಮ್ಮ ಎಷ್ಟೋ ಸಾರಿ ಮನೆಯಲ್ಲಿ ಆಮ್ಲೇಟ್ ಮಾಡಿಕೊಂಡು ತಿಂದಿದ್ದಾಳೆ. ಹಾಗೆ ನೋಡಿದರೆ ಅಕ್ಕಯ್ಯಮ್ಮನಿಗೆ ಚಿಕನ್, ಮಟನ್ ಸಾರುಗಳನ್ನು ಮಾಡುವುದು ಕೂಡಾ ಚನ್ನಾಗಿಯೇ ಬರುತ್ತದೆ. ಊರಿನಲ್ಲಿ ಹೊಲ, ತೋಟಗಳ ಹತ್ತಿರ ಪಾರ್ಟಿ ಮಾಡುವ ಯುವಕರು ತಿಂಗಳಿಗೊಮ್ಮೆಯಾದರೂ ಚಿಕನ್ ತಗೊಂಡು ಬಂದು ಮಾಡಿಕೊಡುವಂತೆ ಅಕ್ಕಯ್ಯಮ್ಮನಿಗೆ ದುಂಬಾಲು ಬೀಳುತ್ತಾರೆ. ಅಕ್ಕಯ್ಯಮ್ಮ ಇಲ್ಲ ಅನ್ನದಂತೆ ಮಾಡಿಕೊಡುತ್ತಾಳೆ. ತನಗೂ ಒಂದೆರಡು ಸೌಟು ಸಾರನ್ನು ಎತ್ತಿಟ್ಟುಕೊಳ್ಳುತ್ತಾಳೆ. ಎಷ್ಟೋ ಸಾರಿ ಹುಡುಗರು ರಾತ್ರಿ ಪಾರ್ಟಿ ಮುಗಿಸಿ ಬೆಳಗ್ಗೆ ಬಂದು, ''ಅಕ್ಕಯ್ಯಮ್ಮೋ ಏನ್ ಸೂಪರ್ರಾಗಿತ್ತು ಗೊತ್ತಾ ಚಿಕನ್ ಸಾರು ಅಬ್ಬಬ್ಬಾ'' ಎಂದು ಕೊಂಡಾಡಿ ಹೋಗುತ್ತಿದ್ದರು. ಏನಾದರಾಗಲಿ ಮನೆಯಲ್ಲೇ ಆಮ್ಲೇಟ್ ಮಾಡಿ ಮಾರಬೇಕೆಂದು ಅಕ್ಕಯ್ಯಮ್ಮ ತೀರ್ಮಾನಿಸಿದಾಗ ಆಕಾಶದಲ್ಲಿ ನಕ್ಷತ್ರಗಳು ಶುಭ್ರವಾಗಿ ಮಿನುಗುತ್ತಿದ್ದವು. ನಿದ್ರಾದೇವಿ ತುಂಬಾ ಆಪ್ಯಾಯಮಾನದಿಂದ ಅಕ್ಕಯ್ಯಮ್ಮನನ್ನು ಆಲಂಗಿಸಿಕೊಂಡಿದ್ದಳು.

ಇದಾದ ಐದು ದಿನಗಳಿಗೆ ಬುಧವಾರ ಬಂದಿತ್ತು. ಆವೊತ್ತು ಮಧುಗಿರಿ ಸಂತೆ. ಅಕ್ಕಯ್ಯಮ್ಮ ಒಂದು ಸಾವಿರ ರೂಪಾಯಿ ಇಟ್ಟುಕೊಂಡು ಮಧುಗಿರಿ ಬಸ್ಸು ಹತ್ತಿಯೇ ಬಿಟ್ಟಳು. ಸಂತೆಯಲ್ಲಿ ಹಗುರ ಮನಸ್ಸಿನಿಂದ ಓಡಾಡಿದ್ದಳು. ಮೊದಲು ಒಂದು ಸುಮಾರಾದ ದೊಡ್ಡ ಹೆಂಚನ್ನು ಖರೀದಿಸಿದ್ದಳು. ಒಂದೇ ಸಾರಿ ನಾಲ್ಕು ಆಮ್ಲೇಟ್‌ಗಳನ್ನು ಹುಯ್ಯಬಹುದಾದಷ್ಟು ಅಗಲವಿತ್ತು. ಮನೆಯಲ್ಲಿ ಸರ್ಕಾರದವರು ಪುಗಸಟ್ಟೆ ಕೊಟ್ಟ ಗ್ಯಾಸ್ ಸ್ಟೌ ಮತ್ತು ಸಿಲಿಂಡರುಗಳಿದ್ದವು. ಗ್ಯಾಸ್ ಸ್ಟೌ ಇದ್ದರೂ ಅಕ್ಕಯ್ಯಮ್ಮ ಹೆಚ್ಚಾಗಿ ಸೌದೆ ಒಲೆಯಲ್ಲಿಯೇ ಅಡುಗೆ ಮಾಡುತ್ತಿದ್ದಳು. ಹಾಗಾಗಿ, ಒಂದು ಗ್ಯಾಸ್ ಸಿಲಿಂಡರ್ ಆರೇಳು ತಿಂಗಳು ಬಾಳಿಕೆ ಬರುತ್ತಿತ್ತು. ಆಮ್ಲೇಟ್ ಹಾಕಲು ಗ್ಯಾಸ್ ಸ್ಟೌ ಬಳಸಿಕೊಳ್ಳಲು ಪ್ಲಾನ್ ಮಾಡಿಕೊಂಡಿದ್ದಳು. ಒಂದು ನೂರು ಪೇಪರ್ ಪ್ಲೇಟುಗಳನ್ನು ಕೊಂಡುಕೊಂಡಿದ್ದಳು. ಹಾಗೇ ಸಂತೆಯ ತರಕಾರಿ ವಿಭಾಗಕ್ಕೆ ಹೋಗಿ ಈರುಳ್ಳಿ, ಹಸಿಮೆಣಸಿನಕಾಯಿ, ಕೊತ್ತಂಬರಿಸೊಪ್ಪು, ಟೊಮೆಟೊ ಖರೀದಿಸಿ ಬ್ಯಾಗು ತುಂಬಿಸಿಕೊಂಡಿದ್ದಳು. ಎಲ್ಲವನ್ನೂ ಕೊಂಡು ಸಂತೆ ಬಿಡುವಾಗ ಎದುರಿಗೆ ಹಾಲಿನ ಡೈರಿ ಸೆಕ್ರೇಟರಿ ರಾಮದಾಸಪ್ಪ ಎದುರಾಗಿದ್ದ. ರಾಮದಾಸಪ್ಪ ಊರಿನಲ್ಲಿ ತುಂಬಾ ಒಳ್ಳೆಯ ಮನುಷ್ಯನೆಂದು ಹೆಸರು ಮಾಡಿದ್ದ. ಆದರೆ, ಹಾಲಿನ ಡೈರಿಯಲ್ಲಿ ದಿನವೂ ಕಾಸು ಓಡಾಡುತ್ತಿದ್ದರಿಂದ ಕುಡಿಯುವುದನ್ನು ಕಲಿತಿದ್ದ. ಅಕ್ಕಯ್ಯಮ್ಮನನ್ನು ಕಂಡು, ''ಏನ್ ಅಕ್ಕಯ್ಯಮ್ಮ ಭರ್ಜರಿ ಸಂತೆ ಮಾಡಿದ್ದೀಯ.'' ಎಂದು ಮಾತು ತೆಗೆದಿದ್ದ. ಅಕ್ಕಯ್ಯಮ್ಮನನ್ನು ಅಂಗನವಾಡಿ ಕೆಲಸದಿಂದ ತೆಗೆದದ್ದು ರಾಮದಾಸಪ್ಪನಿಗೂ ಬೇಸರ ತರಿಸಿತ್ತು. 'ಊರಿಗೆ ಬಂದೋಳು ನೀರಿಗೆ ಬರದೆ ಇರ್ತಾಳ' ಎಂಬ ಗಾದೆ ನೆನಪಾಗಿ ಇವೊತ್ತಲ್ಲ ನಾಳೆ ಎಲ್ಲರಿಗೂ ಗೊತ್ತಾಗೇ ಆಗ್ತದೆ ಎಂದುಕೊಂಡು ಅಕ್ಕಯ್ಯಮ್ಮ ರಾಮದಾಸಪ್ಪನ ಹತ್ತಿರ ತಾನು ಆಮ್ಲೇಟ್ ಅಂಗಡಿ ಇಡುವ ಬಗ್ಗೆ ಹೇಳಿಬಿಟ್ಟಿದ್ದಳು. ರಾಮದಾಸಪ್ಪನು ನಕ್ಕು, ''ಒಳ್ಳೆದಾಗ್ಲಿ ಅಕ್ಕಯ್ಯಮ್ಮ, ಆದ್ರೆ ಪಿಚ್ಚೆ ಹಾಕ್ಕೊಂಡ್ರೂ ಊರಲ್ಲಿ ಯಾರಿಗೂ ಒಂದು ನಯಾಪೈಸ ಸಾಲಗೀಲ ಕೊಟ್ಟೀಯ. ಆದಷ್ಟು ವ್ಯಾಪಾರಾನೇ ಸಾಕು